ಓ.ಎಸ್. ನಂಃ 57/2016

ಪಿಡಬ್ಲು - 1

**ಸಾಕ್ಷಿಯನ್ನು ದಿನಾಂಕಃ 01.07.2019 ರಂದು ಪುನಃ ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು, ಶ್ರೀ ಎಸ್.ಡಿ.ಎಸ್., ರವರಿಂದಃ**

5. ಒಂದನೆ ಪ್ರತಿವಾದಿ ಸಂಗಪ್ಪ ನನ್ನ ತಂದೆ. ಪ್ರತಿವಾದಿ ನಂ. 2 ರಿಂದ 4 ರವರು ನನ್ನ ಸಹೋದರರಾಗಿರುತ್ತಾರೆ. ಪ್ರತಿವಾದಿ ನಂ. 5 ರಿಂದ 7 ನನ್ನ ಸಹೋದರಿಯರು. 8 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ. 9 ನೇ ಪ್ರತಿವಾದಿ ನನ್ನ ತಾಯಿ. ನನ್ನ ವಿವಾಹವಾಗಿದೆ. ನಾನು 5 ನೇ ಪ್ರತಿವಾದಿ ರೇಣುಕಾರವರ ಮಗಳನ್ನು ಮದುವೆ ಮಾಡಿಕೊಂಡಿದ್ದೇನೆ. 5 ನೇ ಪ್ರತಿವಾದಿಯ ಪತಿ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟು 24 ವರ್ಷಗಳಾಗಿವೆ. ಅವರು ಕೆ.ಸಿ.ಸಿ ಬ್ಯಾಂಕ ರೋಣ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಬ್ಯಾಂಕ ಖಾಸಗಿ ಬ್ಯಾಂಕ ಆಗಿತ್ತು ಎಂದರೆ ಸರಿ. ಸಾಕ್ಷಿ ಕೋ-ಆಪರೇಟಿವ್ ಬ್ಯಾಂಕ ಎಂದು ಹೇಳುತ್ತಾರೆ. ವಿರುಪಾಕ್ಷಪ್ಪ ಮೃತಪಟ್ಟ ನಂತರ ಕುಟುಂಬದ ನಿರ್ವಹಣೆಯನ್ನು ನನ್ನ ಅಕ್ಕ ಮಾಡುತ್ತಿದ್ದರು.

6. ಸದರಿ ರೇಣುಕಾ ರವರು ಮನೆ ಕೆಲಸ ಮಾಡುತ್ತಾರೆ. ವಿರುಪಾಕ್ಷಪ್ಪ ರವರಿಗೆ 4 ಎಕರೆ, 2 ಗುಂಟೆ ಜಮೀನು ಇತ್ತು. ಅದರ ಸರ್ವೆ ನಂ. 130/2 ಆಗಿರುತ್ತದೆ. ನಾನು ಹೇಳಿದಂತೆ , ವಿರುಪಾಕ್ಷಪ್ಪರವರಿಗೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ವಿರುಪಾಕ್ಷಪ್ಪ ರವರಿಗೆ ಜಮೀನು ಇದೆ ಎಂದು ತೋರಿಸಲು ಖರೀದಿ ಹಿಡಿದ ಬಗ್ಗೆ ಹೇಳಿರುತ್ತೇನೆ. ಆದರೆ ಆ ದಾಖಲೆ ಹಾಜರ ಮಾಡಿಲ್ಲ.

7. ಪ್ರಧಾನ ಸಿವಿಲ್ ಜಡ್ಜ ರವರ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 211/2014 ರಂತೆ ಎರಡನೆ ಪ್ರತಿವಾದಿ ದಾವೆಯನ್ನು ನಮ್ಮ ಮೇಲೆ ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ದಿವಸ ನ್ಯಾಯಾಲಯದಲ್ಲಿ ಬಂದು ಬೇಟಿಯಾಗಿರುತ್ತೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ, ನಾನು ಅವಶ್ಯಕ ಪಕ್ಷಗಾರನಾಗಿರುತ್ತೇನೆ ಎಂದು ಹೇಳಿದ್ದರೂ ಸಹ ನಾನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ, ವಕೀಲರ ಕೋರಿಕೆಯ ಮೇರೆಗೆ, ಮುಂದಿನ ಪಾಟಿ ಸವಾಲನ್ನು ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)***

**ಓ. ಹೇ. ಕೇ. ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.**